# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಸ್ಟಾರ್ಟ್‌ಅಪ್ ನೀತಿ: 2022-2027ರ ಬಗ್ಗೆ.

**ಓದಲಾಗಿದೆ:** 1. ವ್ಯವಸ್ಥಾಪಕ ನಿರ್ದೇಶಕರು, ಕಿಟ್ಸ್ ರವರ ಪತ್ರ ಸಂ: KITS/IT/SUCO/24/2022 (Comp. No:816188)/180, ದಿ: 16.08.2022 ರಲ್ಲಿನ ಪ್ರಸ್ತಾವನೆ

****

**ಪ್ರಸ್ತಾವನೆ:**

2021-22ನೇ ಸಾಲಿನ ಆಯವ್ಯಯದಲ್ಲಿ, ಈ ಕೆಳಕಂಡಂತೆ ಘೋಷಿಸಲಾಗಿದೆ :-

> *"228. ಕರ್ನಾಟಕದಲ್ಲಿ ನವೋದ್ಯಮಕ್ಕಿರುವ ಪೂರಕ ವಾತಾವರಣವನ್ನು ಮತ್ತಷ್ಟು ಬಲಪಡಿಸಲು ಕರ್ನಾಟಕ ಸ್ಟಾರ್ಟ್ ಅಪ್ ಕಾರ್ಯನೀತಿಯನ್ನು ಪರಿಷ್ಕರಿಸಲಾಗುವುದು. ನಾವೀನ್ಯತೆಗೆ ಉತ್ತೇಜನ, ಹೆಚ್ಚಿನ ಉದ್ಯೋಗ ಸೃಜನೆ ಹಾಗೂ ಆರ್ಥಿಕ ಬೆಳವಣಿಗೆಯ ವೇಗವರ್ಧನೆ ಇದರ ಗುರಿಯಾಗಿದೆ".*

(2) ಭಾರತದ ನಾವೀನ್ಯತೆಯ ಶಕ್ತಿಕೇಂದ್ರವಾದ ಕರ್ನಾಟಕವು, NITI ಆಯೋಗದ India Innovation Index ರಲ್ಲಿ ಸತತ 3 ವರ್ಷಗಳು (2019, 2020 and 2021) 1ನೇ ಶ್ರೇಯಾಂಕ ಗಳಿಸಿದ್ದು *block chain, IoT, artificial intelligence, machine learning, cyber security, robotics, nano-technology, genetic engineering, and quantum technologies* ಮುಂತಾದ ಅತ್ಯಾಧುನಿಕ ತಂತ್ರಜ್ಞಾನಗಳಲ್ಲಿ ಮುಂಚೂಣಿಯಲ್ಲಿದೆ. ಭವಿಷ್ಯಾತ್ಮಕ ನೀತಿಗಳನ್ನು ಅಭಿವೃದ್ಧಿಪಡಿಸುವಲ್ಲಿ ಹಾಗೂ ಹೊಸ ಮತ್ತು ಕ್ರಾಂತಿಪೂರ್ಣ ತಂತ್ರಜ್ಞಾನಗಳನ್ನು ಬೆಂಬಲಿಸುವಲ್ಲಿ ರಾಜ್ಯದ ಉದಾಹರಣಾಪೂರ್ಣ ಉಪಕ್ರಮಗಳಿಂದಾಗಿ ಕರ್ನಾಟಕವು ಭಾರತ ಸರ್ಕಾರದ DPIIT States Startup Ranking 2021 ಶ್ರೇಯಾಂಕದಲ್ಲಿ 'ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿರುವ ರಾಜ್ಯ' ಹಾಗೂ DPIIT States Startup Ranking ವರದಿಯಲ್ಲಿ ಸತತ ಎರಡು ವರ್ಷಗಳಲ್ಲಿ (2018 ಮತ್ತು 2019) 'ಅತ್ಯುನ್ನತ ಕಾರ್ಯನಿರ್ವಹಣೆ'ಯ ರಾಜ್ಯವಾಗಿ ಸ್ಥಾನ ಗಳಿಸಲು ಕಾರಣವಾಗಿದೆ.

(3) "The Silicon Valley of India" ಮತ್ತು "Innovation and Startup Capital of India" ಎಂದು ಹೆಸರುವಾಸಿಯಾಗಿರುವ ಕರ್ನಾಟಕವು 15000ಕ್ಕೂ ಹೆಚ್ಚು ನವೋದ್ಯಮಗಳೊಂದಿಗೆ ಅತ್ಯಂತ ಪ್ರಬುದ್ಧವಾದ ಪೂರಕ ವಾತಾವರಣವನ್ನು ಹೊಂದಿದೆ ಹಾಗೂ ಮುಡಿಪಾಗಿಟ್ಟ ಸ್ಟಾರ್ಟ್‌ಅಪ್ ನೀತಿಯನ್ನು 2015ನೇ ಇಸವಿಯಲ್ಲಿ ಪ್ರಕಟಿಸಿದ ದೇಶದಲ್ಲಿಯೇ ಮೊಟ್ಟ ಮೊದಲ ರಾಜ್ಯವಾಗಿದೆ. ನವೋದ್ಯಮಗಳ ವ್ಯವಹಾರ ವರ್ತುಲದ ವಿವಿಧ ಹಂತಗಳಲ್ಲಿ ಹಣಕಾಸು ಒದಗಿಸುವುದರ (seed funding, venture capital funding, angel investor funding ಮತ್ತು sector-specific funding) ಜೊತೆಗೆ ಪರಿಪೋಷಣಾ ಬೆಂಬಲ, ಮಾರ್ಗದರ್ಶನ, ಸಂಘಟಿತ ಕಾರ್ಯಸ್ಥಳಗಳು ಹಾಗೂ ನವೋದ್ಯಮಗಳ ಬೆಳವಣಿಗೆಗೆ ಅನುಕೂಲ ಕಲ್ಪಿಸುವ ಮುಡಿಪಾದ ಸ್ಟಾರ್ಟ್‌ಅಪ್ ಕೋಶದೊಂದಿಗೆ ನವೋದ್ಯಮಗಳನ್ನು ಬೆಂಬಲಿಸುವ ಉದ್ದೇಶದೊಂದಿಗೆ ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ.

(4) ರಾಜ್ಯದಲ್ಲಿರುವ ನಾವೀನ್ಯತಾ ಹಬ್‌ಗಳು, ಇನ್ಕ್ಯುಬೇಟರ್‌ಗಳು, ಉತ್ಕೃಷ್ಟತಾ ಕೇಂದ್ರಗಳು, ತಂತ್ರಜ್ಞಾನ ಮತ್ತು ವ್ಯವಹಾರದ ಪರಿಪೋಷಕಗಳು, Common Instrumentation ಸೌಲಭ್ಯಗಳು, NAIN ಸಂಸ್ಥೆಗಳು ಹಾಗೂ ಇವುಗಳಲ್ಲಿರುವ ಅತ್ಯಾಧುನಿಕ ಸೌಲಭ್ಯಗಳು ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿಯ ಮೂಲಸೌಕರ್ಯವನ್ನು ಮತ್ತು 1.25 ಲಕ್ಷ ಚ.ಅಡಿಯಷ್ಟು ಪರಿಪೋಷಣಾ ಜಾಗ - ಹೀಗೆ ತಂತ್ರಜ್ಞಾನಕ್ಕಿರುವ ವಿಶಾಲವಾದ ಪೂರಕ ವಾತಾವರಣವನ್ನು ಹೊಂದಿರುವುದಕ್ಕೆ ರಾಜ್ಯವು ಹೆಮ್ಮೆಪಡುತ್ತದೆ. ಪರಿಸರ, ಸಾಮಾಜಿಕ ಹಾಗೂ ಆಡಳಿತ (ESG) ಚೌಕಟ್ಟು ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು (SDGs) - ಇವುಗಳಿಗೆ ಸಂಬಂಧಿಸಿದಂತೆ ಸಾಮಾಜಿಕ ಪರಿಣಾಮವಿರುವ ಸಮಸ್ಯೆಗಳನ್ನು ಬಗೆಹರಿಸಲು ನಾವೀನ್ಯತಾಪೂರ್ಣ ಮತ್ತು ಕ್ರಾಂತಿಪೂರ್ಣ ಪರಿಕಲ್ಪನೆಗಳನ್ನು ಪ್ರದರ್ಶಿಸುವ ಮತ್ತು ಪ್ರಸ್ತುತಪಡಿಸುವ ಸಲುವಾಗಿ ನವೋದ್ಯಮಗಳಿಗೆ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು Grand Challenges ಕಾರ್ಯಕ್ರಮದ ಮೂಲಕ ಪ್ರತ್ಯೇಕ ವೇದಿಕೆಯನ್ನು ಅಭಿವೃದ್ಧಿಪಡಿಸಿದೆ. ಮುಂದುವರಿದು, ಸರ್ಕಾರವು ಜಾಗತಿಕ ನಾವೀನ್ಯತಾ ಒಕ್ಕೂಟಗಳ (GIA) ಮೂಲಕ ನವೋದ್ಯಮಗಳು ಮಾರುಕಟ್ಟೆಯನ್ನು ಪ್ರವೇಶಿಸಲು ಅನುವು ಮಾಡಿಕೊಟ್ಟಿದೆ.

GIA ಮೂಲಕವಾಗಿ, ಸರ್ಕಾರವು ನವೋದ್ಯಮಗಳಿಗೆ ವಿಶ್ವದೆಲ್ಲೆಡೆ ಇರುವ ನಾವೀನ್ಯತಾ ಹಬ್‌ಗಳೊಂದಿಗೆ ತೊಡಗಿಕೊಂಡು ಸಹಭಾಗಿತ್ವ ಸಾಧಿಸಲು ಮತ್ತು ನವೋದ್ಯಮಗಳನ್ನು ಜಾಗತಿಕ ಮಟ್ಟದಲ್ಲಿ ಸ್ಥಾನ ಕಲ್ಪಿಸಲು ಅನುವು ಮಾಡಿಕೊಟ್ಟಿದೆ. ಇಲಾಖೆಯು 30ಕ್ಕೂ ಹೆಚ್ಚು ದೇಶಗಳೊಂದಿಗೆ ಅಂತರರಾಷ್ಟ್ರೀಯ ಸಹಭಾಗಿತ್ವವನ್ನು ಅಭಿವೃದ್ಧಿಪಡಿಸಿಕೊಂಡಿದೆ.

(5) ಸದರಿ ಸ್ಟಾರ್ಟ್‌ಅಪ್ ನೀತಿಯ ಕರಡು ರಚಿಸುವಲ್ಲಿ Vision Group on Startups ರವರಿಂದ ಪೂರಕ ಅಂಶಗಳನ್ನು ಪಡೆದುಕೊಳ್ಳಲಾಗಿದೆ. ಮೇಲೆ ಓದಲಾದ (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಿಟ್ಸ್ ರವರು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ನೀತಿಯ ಈ ಕೆಳಕಂಡ ಗುರಿಗಳು/ಲಕ್ಷ್ಯಗಳು ಹಾಗೂ ಕಾರ್ಯತಂತ್ರಗಳಿವೆ:

**ಗುರಿಗಳು ಮತ್ತು ಲಕ್ಷ್ಯಗಳು:**

ನವೋದ್ಯಮಗಳನ್ನು ಅವುಗಳ ವ್ಯವಹಾರ ವರ್ತುಲದಾದ್ಯಂತ ಪೋಷಿಸಲು ಹಾಗೂ ಕರ್ನಾಟಕವನ್ನು ನವೋದ್ಯಮಗಳಿಗೆ ಜಾಗತಿಕ ನಾವೀನ್ಯತಾ ಹಬ್ ಆಗಿಸಲು ರಾಜ್ಯದೆಲ್ಲೆಡೆ ಅನುಕೂಲಕರ ಪರಿಸರವನ್ನು ಸೃಜಿಸುವಲ್ಲಿ ಸದರಿ ನೀತಿಯು ಮಹತ್ವದ ಪಾತ್ರ ವಹಿಸುವ ಗುರಿಯನ್ನು ಹೊಂದಿದೆ. ಸ್ಟಾರ್ಟ್‌ಅಪ್ ನೀತಿಯು ಅದರ ನೀತಿ ಅವಧಿಯಲ್ಲಿ ಹೊಂದಿರುವ ಗುರಿಗಳು ಈ ಕೆಳಕಂಡಂತಿವೆ:-

- ಸರ್ಕಾರಿ ಸಂಸ್ಥೆಗಳಲ್ಲಿ ಮೂಲಸೌಕರ್ಯ ಸ್ಥಾಪನೆಯನ್ನು ಬಲಪಡಿಸುವುದು ಮತ್ತು ಬೆಂಗಳೂರಿನ ಹೊರತಾದ ಉದಯೋನ್ಮುಖ ಕ್ಲಸ್ಟರ್‌ಗಳ ಮೇಲೆ ಹೆಚ್ಚಿನ ಒತ್ತು ನೀಡುವುದರೊಂದಿಗೆ ಪೂರಕ ವಾತಾವರಣವನ್ನು ಬೆಂಬಲಿಸುವುದು.
- ಕಲಿಕೆಯ ಯಾವುದೇ ಪಠ್ಯಶಿಸ್ತುಗಳ ವಿದ್ಯಾರ್ಥಿಗಳಲ್ಲಿ ನಾವೀನ್ಯತೆಯ ಮತ್ತು ಉದ್ಯಮಶೀಲತೆಯ ಕೌಶಲ್ಯಗಳನ್ನು ರೂಢಿಸುವುದು ಹಾಗೂ ಅವರುಗಳು ತಮ್ಮ ಪೂರ್ಣ ಸಾಮರ್ಥ್ಯಕ್ಕೆ ಪೋಷಿಸಿಕೊಂಡು ಬೆಳೆಯುವ ನಿಟ್ಟಿನಲ್ಲಿ ಅವಕಾಶಗಳನ್ನು ಒದಗಿಸುವುದು.
- 25,000 ಸಂಖ್ಯೆಯಷ್ಟು ನವೋದ್ಯಮಗಳನ್ನು ಬೆಳೆಸಲು ಉತ್ತೇಜಿಸುವುದು ಮತ್ತು ಹೆಚ್ಚು ಏಳಿಗೆಯಿರುವ ನವೋದ್ಯಮಗಳ ಸಂಖ್ಯೆಯನ್ನು ಮತ್ತಷ್ಟು ಹೆಚ್ಚಿಸುವುದು.
- ಸಾಮಾಜಿಕ ಉದ್ಯಮಶೀಲತೆಯನ್ನು/assistive technology innovation ಗಳನ್ನು ಉತ್ತೇಜಿಸುವುದು.
- ಪರಿಸರ, ಸಾಮಾಜಿಕ ಮತ್ತು ಸರ್ಕಾರದ (ESG) ಚೌಕಟ್ಟಿನಲ್ಲಿ ಪ್ರಸ್ತುತವಿರುವ ಸಾಮಾಜಿಕ ಸವಾಲುಗಳನ್ನು ಬಗೆಹರಿಸಲು ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (SDGs) ತಲುಪುವಲ್ಲಿ ಸಾಮಾಜಿಕ ಆಡಳಿತ ವಲಯಗಳಲ್ಲಿ ನಾವೀನ್ಯತಾಪೂರ್ಣ ತಂತ್ರಜ್ಞಾನ ಪರಿಹಾರಗಳಿಗೆ ಅನುವು ಮಾಡಿಕೊಡುವುದು.
- ಅಸ್ತಿತ್ವವಿರುವ ನವೋದ್ಯಮ ಪೂರಕ ವಾತಾವರಣವನ್ನು ವರ್ಧಿಸಲು ಪ್ರಮುಖ ಪ್ರವರ್ಧಕಗಳಾಗಿ ಪರಿಪೋಷಣೆ ಮತ್ತು ವೇಗವರ್ಧಕ ಮೂಲಸೌಕರ್ಯವನ್ನು ಸೃಜಿಸುವುದನ್ನು ಮತ್ತು ಅಭಿವೃದ್ಧಿಪಡಿಸುವುದನ್ನು ಬೆಂಬಲಿಸುವುದು.
- ಸಾಂಸ್ಥಿಕ ಹೂಡಿಕೆದಾರರಿಂದ ಮತ್ತು ಏಂಜೆಲ್ ಹೂಡಿಕೆದಾರರಿಂದ ಹಾಗೂ ಸರ್ಕಾರದ ಹಣಕಾಸಿನ ಮೂಲಕ ಸಹ ನವೋದ್ಯಮಗಳಲ್ಲಿ ಹೂಡಿಕೆಗೆ ದಾರಿಮಾಡಿಕೊಡುವ ಹಣಕಾಸಿನ ಮಾರ್ಗಗಳಿಗೆ ಅನುಕೂಲ ಕಲ್ಪಿಸಿಕೊಡುವುದು.

**ಕಾರ್ಯತಂತ್ರಗಳು:**

- **ಪಿಲ್ಲರ್ 1: New Age Innovation Network ಅನ್ನು ಸೃಜಿಸಿ ಬಲಪಡಿಸುವುದು :** "New Age Innovation Network 2.0"ರಡಿ ಬೆಂಗಳೂರಿನ ಹೊರತಾದ ಉದಯೋನ್ಮುಖ ತಂತ್ರಜ್ಞಾನ ಕ್ಲಸ್ಟರ್‌ಗಳಲ್ಲಿ ಉನ್ನತ ಕಲಿಕೆಯ ತಂತ್ರಜ್ಞಾನ ಸಂಸ್ಥೆಗಳಲ್ಲಿ ನಾವೀನ್ಯತೆ ಮತ್ತು ಉದ್ಯಮಶೀಲತೆಯನ್ನು ವರ್ಧಿಸುವುದು.
- **ಪಿಲ್ಲರ್ 2: ಶಿಕ್ಷಣ ವಲಯ ಮತ್ತು ಉದ್ಯಮದ ನಡುವೆ ಸುಭದ್ರ ಪಾಲುದಾರಿಕೆಗಾಗಿ ಪೋಷಿಸುವುದು:** ಬೆಂಗಳೂರು ನಗರ ಜಿಲ್ಲೆಯ ಹೊರಗಿನ ಪ್ರದೇಶಗಳಲ್ಲಿ ಉನ್ನತ ಕಲಿಕೆಯ ಸಂಸ್ಥೆಗಳಲ್ಲಿ Technology Business Incubators (TBIs)ಗಳನ್ನು ಸ್ಥಾಪಿಸುವ ಮೂಲಕ ಬೆಂಗಳೂರು ಹೊರತಾದ ಸ್ಥಳಗಳಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಉತ್ತೇಜಿಸುವುದು.
- **ಪಿಲ್ಲರ್ 3: ನವೋದ್ಯಮಗಳಿಗೆ ಹಣಕಾಸು ಒದಗಿಸುವುದು:** ನವೋದ್ಯಮಗಳ ಬೆಳವಣಿಗೆಯನ್ನು ಬೆಂಬಲಿಸುವ ಸಲುವಾಗಿ Seed funding, venture capital funding, angel investor funding ಮತ್ತು

ವಲಯ ನಿರ್ದಿಷ್ಟ ಅನುದಾನಗಳೇ ಮುಂತಾದ ರೂಪಗಳ ಹಣಕಾಸನ್ನು ಒದಗಿಸಲು ವಿವಿಧ ಹಂತಗಳಲ್ಲಿ ಹಣಕಾಸಿಗೆ ಅವಕಾಶ ಒದಗಿಸುವುದು.

- **ಪಿಲ್ಲರ್ 4: ಮಾರ್ಗದರ್ಶನಕ್ಕೆ ಬೆಂಬಲಿಸುವುದು ಹಾಗೂ ಪರಿಪೋಷಣೆಯ ಮತ್ತು ವೇಗವರ್ಧನೆಯ ಮೂಲಸೌಕರ್ಯವನ್ನು ಸೃಜಿಸುವುದು:** ರಾಜ್ಯದಲ್ಲಿನ ಹೊಸ ಮೂಲಸೌಕರ್ಯವನ್ನು ಸ್ಥಾಪಿಸಲು ಮತ್ತು ಅಸ್ತಿತ್ವದಲ್ಲಿರುವ ಮೂಲಸೌಕರ್ಯವನ್ನು ಬಲಪಡಿಸಲು ಜಾಗತಿಕವಾಗಿ ಮತ್ತು ರಾಷ್ಟ್ರೀಯವಾಗಿ ಹೆಸರುವಾಸಿಯಾಗಿರುವ ಪರಿಪೋಷಕಗಳು ಮತ್ತು ವೇಗವರ್ಧಕಗಳಿಗೆ ಸಹಾಯಕವಾಗುವುದು.
- **ಪಿಲ್ಲರ್ 5: ಎಲ್ಲ ಹಿತಾಸಕ್ತರುಗಳನ್ನು ಒಳಗೊಳ್ಳುವ ಹಾಗೂ ಸಮಾನ ಅವಕಾಶವಿರುವ ನವೋದ್ಯಮ ಪೂರಕ ವಾತಾವರಣವನ್ನು ನಿರ್ಮಿಸುವುದು:** ರಾಜ್ಯದೆಲ್ಲೆಡೆ ಸಮಗ್ರವಾದ ಮತ್ತು ಲಿಂಗಭೇದವಿಲ್ಲದ ನವೋದ್ಯಮ ಪೂರಕ ವಾತಾವರಣವನ್ನು ಬೆಂಬಲಿಸಲು ವೈವಿಧ್ಯತೆ, ಸಮಾನತೆ ಮತ್ತು ಒಳಗೊಳ್ಳುವಿಕೆಯನ್ನು ಅಳವಡಿಸಿಕೊಳ್ಳುವುದು.
- **ಪಿಲ್ಲರ್ 6: ಸಾಮಾಜಿಕ ಮತ್ತು ಗ್ರಾಮೀಣ ಉದ್ಯಮಶೀಲತೆಯನ್ನು ಪೋಷಿಸುವುದು:** ಮೂಲಭೂತ/ಜನಸಾಮಾನ್ಯರ ನಾವೀನ್ಯತೆ ಮೇಲೆ ಗಮನವನ್ನು ಕೇಂದ್ರೀಕರಿಸಿ, ಹಂತ-2 ಮತ್ತು ಹಂತ-3ರ ನಗರಗಳ ನಾವೀನ್ಯತೆಯುಳ್ಳ ನವೋದ್ಯಮಗಳನ್ನು ಉತ್ತೇಜಿಸಿ ಪ್ರೋತ್ಸಾಹಿಸುವುದು ಹಾಗೂ ಅವುಗಳು ಪ್ರಮಾಣ ಹೆಚ್ಚಿಸಿಕೊಂಡು ಬೆಳೆಯಲು ಸಹಾಯಕವಾಗುವುದು.
- **ಪಿಲ್ಲರ್ 7: ಸಾಮಾಜಿಕ ಪರಿಣಾಮಕ್ಕಾಗಿ ನಾವೀನ್ಯತೆಗೆ ಮಾರ್ಗ ಕಲ್ಪಿಸಿಕೊಡುವುದು:** ESG ಚೌಕಟ್ಟು ಮತ್ತು SDGಗಳಿಗೆ ಸಂಬಂಧಿಸಿದ ಸಾಮಾಜಿಕ ಪರಿಣಾಮದ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ನವೋದ್ಯಮಗಳನ್ನು/ಯುವ ಉದ್ಯಮಶೀಲರುಗಳನ್ನು ಉತ್ತೇಜಿಸುವ ಮೂಲಕ ಹೊಸ ತಂತ್ರಜ್ಞಾನ-ವರ್ಧಿತ ವ್ಯವಹಾರದ ಮಾದರಿಗಳನ್ನು ಹಾಗೂ ಕ್ರಾಂತಿಪೂರ್ಣ ನಾವೀನ್ಯತೆಯುಳ್ಳ ತಂತ್ರಜ್ಞಾನಗಳಿಗಾಗಿ ಅನ್ವೇಷಿಸುವುದು.
- **ಪಿಲ್ಲರ್ 8: ಅನುಕೂಲ ಮತ್ತು ಸೌಲಭ್ಯ ಕಲ್ಪಿಸುವುದು:** ನವೋದ್ಯಮಗಳ ಕೈಹಿಡಿದು ನಡೆಸಲು ಟ್ರಸ್ಟ್-ಆಧಾರಿತ ಆಡಳಿತ ಶೈಲಿಯನ್ನು ಅಳವಡಿಸಿಕೊಳ್ಳುವುದು ಹಾಗೂ ಸ್ಟಾರ್ಟ್‌ಅಪ್ ಕೋಶ, ಸ್ಟಾರ್ಟ್‌ಅಪ್ ಪೋರ್ಟಲ್ 2.0 ಮುಂತಾದ ಪ್ರಮುಖ ಅನುಕೂಲಗಳ ಮೂಲಕ ರಾಜ್ಯದಲ್ಲಿನ ಉದ್ಯಮ ಕೈಗೊಳ್ಳುವಲ್ಲಿ ಸುಗಮತೆಗೆ ಅನುಕೂಲ ಕಲ್ಪಿಸಿಕೊಡುವುದು.
- **ಪಿಲ್ಲರ್ 9: ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳ ರೂಪದಲ್ಲಿ ರಾಜ್ಯ ಸರ್ಕಾರದ ಬೆಂಬಲ ಒದಗಿಸುವುದು:** ನೀತಿ ಅವಧಿಯಲ್ಲಿ ನವೋದ್ಯಮಗಳಿಗೆ ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳ ರೂಪದಲ್ಲಿ ಬೆಂಬಲ ಒದಗಿಸುವುದು.

(6) ಉನ್ನತ ಶಿಕ್ಷಣದಲ್ಲಿನ ತಂತ್ರಜ್ಞಾನ ಸಂಸ್ಥೆಗಳ NAIN ಕೇಂದ್ರಗಳನ್ನು ಹಾಗೂ ಉನ್ನತ ಕಲಿಕಾ ಸಂಸ್ಥೆಗಳಲ್ಲಿ Technology Business Incubators 2.0 (TBIs 2.0)ಗಳನ್ನು ಸ್ಥಾಪಿಸಿ ಬಲಪಡಿಸುವಲ್ಲಿ ಹಣಕಾಸಿನ ಬೆಂಬಲವನ್ನು ಹಾಗೂ ನವೋದ್ಯಮಗಳಿಗೆ ಹಣಕಾಸಿನ ವಿವಿಧ ಬೆಂಬಲಗಳನ್ನು (Idea2PoC Grant-In-Aid Scheme, Seed Fund, Fund of Funds, Grand Challenge ಇತ್ಯಾದಿ) ಕರ್ನಾಟಕ ಸ್ಟಾರ್ಟ್‌ಅಪ್ ನೀತಿ 2022-27ರಡಿಯ ಹಣಕಾಸಿನ ಪ್ರೋತ್ಸಾಹಕಗಳಲ್ಲಿ ಮತ್ತು ಇನ್ನಿತರ ಒದಗಿಸುವಿಕೆಗಳಲ್ಲಿ ಒಳಗೊಂಡಿದೆ. ಸರಕು ಮತ್ತು ಸೇವಾ ತೆರಿಗೆಯ (GST) ಮರುಪಾವತಿ ಬೆಂಬಲ, ಮಾರ್ಕೆಟಿಂಗ್ ವೆಚ್ಚ, ಪೇಟೆಂಟ್ ಸಲ್ಲಿಕೆಯ ವೆಚ್ಚ ಹಾಗೂ ಗುಣಮಟ್ಟ ಪ್ರಮಾಣೀಕರಣದ ವೆಚ್ಚಗಳ ಮರುಪಾವತಿಯನ್ನು ಸಹ ನವೋದ್ಯಮಗಳಿಗೆ ಒದಗಿಸಲಾಗುತ್ತದೆ.

(7) ವ್ಯವಸ್ಥಾಪಕ ನಿರ್ದೇಶಕರು, ಕಿಟ್ಸ್ ರವರ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಕರ್ನಾಟಕ ಸ್ಟಾರ್ಟ್‌ಅಪ್ ನೀತಿ 2022-27 ಅನ್ನು ದಿನಾಂಕ 22ನೇ ಡಿಸೆಂಬರ್ 2022 ರಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯ ವಿಷಯ ಸಂ. ಸಿ:715/2022 ರಲ್ಲಿ ಅನುಮೋದಿಸಲಾಗಿದೆ. ಆದುದರಿಂದ, ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ ಐಟಿಬಿಟಿ 6 ಪಿಆರ್‌ಎಂ 2022**
**ಬೆಂಗಳೂರು, ದಿನಾಂಕ: 28.12.2022**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರವು ಈ ಆದೇಶಕ್ಕೆ ಅಡಕವಾಗಿಸಿರುವ **ಕರ್ನಾಟಕ ಸ್ಟಾರ್ಟ್‌ಅಪ್ ನೀತಿ 2022-27** ಅನ್ನು ಅನುಮೋದಿಸಿದೆ.

(2) ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂ: FD 111 Exp-2/2022, ದಿ:13.10.2022 ಹಾಗೂ 31.10.2022; ಕಡತ ಸಂ: DITB/TECH/TECM/9/2022, ದಿ:27.08.2022ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಟಿಪ್ಪಣಿ; ಕಾರ್ಮಿಕ ಇಲಾಖೆಯ ಟಿಪ್ಪಣಿ ಸಂ: ಕಾಇ 451 ಎಲ್ಇಟಿ 2022,

ದಿ:20/08/2022; ಉನ್ನತ ಶಿಕ್ಷಣ ಇಲಾಖೆಯ ಅ.ಟಿ. ಸಂ: ED 117 DTE 2022, ದಿ:22.11.2022; ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಇಲಾಖೆಯ ಟಿಪ್ಪಣಿ ಸಂ: ಕೌಉಜೀಇ 173 ಕೌಗುಇ 2022, ದಿ:22.11.2022; ಸಿಆಸುಇ (ಇ-ಆಡಳಿತ)ಯ ಟಿಪ್ಪಣಿ ಸಂ: DPAR-PRJ/126/2022-DO3, ದಿ:02.11.2022 ಗಳನ್ವಯ ಹೊರಡಿಸಲಾಗಿದೆ.

ಕರ್ನಾಟಕದ ರಾಜ್ಯಪಾಲದ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಇ. ವಿ. ರಮಣ ರೆಡ್ಡಿ)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

**ಇವರಿಗೆ:**

ಸಂಕಲನಕಾರರು, ಕರ್ನಾಟಕ ಸರ್ಕಾರದ ರಾಜ್ಯಪತ್ರ, ಬೆಂಗಳೂರು.

**ಪ್ರತಿ:**

1. ಮಹಾಲೇಖಪಾಲರು (ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ.
4. ಸನ್ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ.
5. ಸರ್ಕಾರದ ಎಲ್ಲ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು.
6. ಕೈಗಾರಿಕಾಭಿವೃದ್ಧಿ ಆಯುಕ್ತರು ಮತ್ತು ವಾಣಿಜ್ಯ ಮತ್ತು ಕೈಗಾರಿಕೆ ನಿರ್ದೇಶಕರು, ಬೆಂಗಳೂರು.
7. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಕಲಬುರಗಿ.
8. ಕರ್ನಾಟಕ ರಾಜ್ಯದ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
9. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ.
10. ನಿರ್ದೇಶಕರು, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕಿಟ್ಸ್, ಶಾಂತಿನಗರ, ಬೆಂಗಳೂರು.
12. ಅಧ್ಯಕ್ಷರು, ಕರ್ನಾಟಕ ವಿಷನ್ ಗ್ರೂಪ್ ಆನ್ ಸ್ಟಾರ್ಟ್‌ಅಪ್ಸ್.
13. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ, ಖನಿಜ ಭವನ, ಬೆಂಗಳೂರು.
14. ಸರ್ಕಾರದ ಉಪಕಾರ್ಯದರ್ಶಿ(ಸಚಿವಸಂಪುಟ), ಸಚಿವ ಸಂಪುಟ ಶಾಖೆ (ವಿಷಯ ಸಂಖ್ಯೆ:715/2022).
15. ಮಾನ್ಯ ವಿದ್ಯುನ್ಮಾನ, ಮಾತಂ, ಜೈತಂ, ವಿ&ತಂ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ.
16. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
17. ಉಪಾಧ್ಯಕ್ಷರು, NASSCOM, ಬೆಂಗಳೂರು (ವ್ಯ.ನಿ., ಕಿಟ್ಸ್ ರವರ ಮುಖಾಂತರ).
18. ಅಧ್ಯಕ್ಷರು, India Electronics & Semiconductor Association[IESA], ಬೆಂಗಳೂರು (ವ್ಯ.ನಿ., ಕಿಟ್ಸ್ ರವರ ಮುಖಾಂತರ)
19. ಅಧ್ಯಕ್ಷರು, Association of Biotechnology Led Enterprises, ಬೆಂಗಳೂರು (ವ್ಯ.ನಿ., ಕಿಟ್ಸ್ ರವರ ಮುಖಾಂತರ).
20. ಅಧ್ಯಕ್ಷರು, Association of Bangalore Animation Industry, ಬೆಂಗಳೂರು, (ವ್ಯ.ನಿ., ಕಿಟ್ಸ್ ರವರ ಮುಖಾಂತರ)
21. ಅಧ್ಯಕ್ಷರು, Karnataka Council, Associated Chambers of Commerce and Industry of India [ASSOCHAM], ಬೆಂಗಳೂರು, (ವ್ಯ.ನಿ., ಕಿಟ್ಸ್ ರವರ ಮುಖಾಂತರ)
22. ಅಧ್ಯಕ್ಷರು, Karnataka State Council, Confederation of Indian Industries (CII), ಬೆಂಗಳೂರು, (ವ್ಯ.ನಿ., ಕಿಟ್ಸ್ ರವರ ಮುಖಾಂತರ)
23. ಮುಖ್ಯಸ್ಥರು, Karnataka State Council, Federation of Indian Chambers of Commerce & Industry [FICCI], ಬೆಂಗಳೂರು, (ವ್ಯ.ನಿ., ಕಿಟ್ಸ್ ರವರ ಮುಖಾಂತರ)
24. ಅಧ್ಯಕ್ಷರು, Federation of Karnataka Chambers of Commerce & Industry [FKCCI], ಬೆಂಗಳೂರು, (ವ್ಯ.ನಿ., ಕಿಟ್ಸ್ ರವರ ಮುಖಾಂತರ)
25. ರಕ್ಷಾಕಡತ / ಬಿಡಿ ಪ್ರತಿಗಳು.

* * * *

# PROCEEDINGS OF THE GOVERNMENT OF KARNATAKA

**Subject:** Karnataka Startup Policy 2022-2027 – reg.

**Read:** 1. Proposal of Managing Director, KITS in letter No. KITS/ IT/ SUCO/ 24/ 2022 (Comp. No:816188)/180, dated:16.08.2022.

****

**Preamble:**

In the budget of FY 2021-22, an announcement was made as follows:-

> *"228. Karnataka Start-up Policy will be revised to utilise in full the already existing congenial environment for new enterprises in Karnataka. Encouraging innovations, creation of more employment and accelerating the economic development is the basic aim."*

(2) Karnataka, a powerhouse of innovation in India, ranked 1st in NITI Aayog's India Innovation Index for 3 consecutive years (2019, 2020 and 2021) is in the forefront of cutting-edge technology such as *block chain, IoT, artificial intelligence, machine learning, cyber security, robotics, nano-technology, genetic engineering, and quantum technologies.* The State's exemplary initiatives towards developing futuristic policies and supporting new and disruptive technologies has been instrumental in Karnataka achieving the rank of 'Best Performer State' in DPIIT States Startup Ranking 2021 and a 'Top performer' consecutively for two years (2018 and 2019) - DPIIT States Startup Ranking Report.

(3) Karnataka, "The Silicon Valley of India" and the "Innovation and Startup Capital of India", has one of the most mature startup ecosystems with around 15000+ startups and is the first State in the country to announce a dedicated Startup Policy in the year 2015. Government has rolled out several programs with the objective of supporting startups in their business lifecycle - right from providing funding at various stages (seed funding, venture capital funding, angel investor funding and sector-specific funding); incubation support, mentorship, co-working spaces and a dedicated Startup Cell to facilitate the growth of the startups.

(4) The State boasts of a vast tech ecosystem comprising incubation space of 1.25 lakh sq. feet with state-of-the-art facility and R&D infrastructure comprising Innovation Hubs, Incubators, Centres of Excellence, Technology & Business Incubators, Common Instrumentation Facilities, NAIN Institutions etc. Through the Grand Challenges Program, Department of Electronics, Information Technology, Biotechnology and Science & Technology has developed a unique platform for startups to showcase and present innovative and disruptive ideas to solve social impact issues pertaining to Environmental, Social, and Governance (ESG) framework and Sustainable Development Goals (SDGs). Further, Government has enabled market access programs for startups. Through Global Innovation Alliances (GIA), Government has enabled startups to engage and collaborate with innovation hubs across the globe and to position startups at a global level. Under the umbrella of GIA, Department has developed international collaboration with over 30 countries.

(5) Inputs of the Vision Group on Startups have been taken for drafting the Startup Policy. Managing Director, KITS in letter read at (1) above, has submitted the proposal on the Startup Policy which has the following targets/goals and strategies:

**Targets and Goals:**

The policy aims to play a vital role in creating an enabling environment across the State for nurturing startups throughout their business lifecycle and make Karnataka a global innovation hub for startups. The following are the targets of the Startup Policy during the policy period:

- Strengthen the infrastructure set up in Government institutions and support the ecosystem with a greater thrust on emerging clusters Beyond Bengaluru.
- Inculcate innovation and entrepreneurial skills in students across all streams of learning and provide opportunities where they can nurture and grow to their full potential.
- Stimulate the growth of upto 25,000 Startups and further increase the number of high growth Startups.
- Encourage social entrepreneurship/assistive technology innovations.
- Facilitate innovative technology solutions in Social Governance sectors to address the existing social challenges in Environmental, Social, and Governance (ESG) framework and to meet Sustainable Development Goals (SDGs).
- Support the creation and development of incubation and acceleration infrastructure as key enablers to boost the prevailing Startup ecosystem.
- Facilitate funding avenues that lead to investment in Startups by institutional investors and angel investors and also through Government funding.

**Strategies:**

- **Pillar 1: Creating and Strengthening New Age Innovation Network:** Boost innovation and entrepreneurship at technology institutions of higher learning in emerging tech clusters Beyond Bengaluru under the "New Age Innovation Network 2.0".
- **Pillar 2: Fostering strong partnerships between Academia and Industry:** Encourage research activities Beyond Bengaluru, by establishing Technology Business Incubators (TBIs) in institutions of higher learning in regions outside Bengaluru Urban District.
- **Pillar 3- Funding for Startups:** Provide access to finance through various stages of funding viz. seed funding, venture capital funding, angel investor funding and sector-specific funding for supporting growth of the Startups.
- **Pillar 4- Supporting Mentorship and Creation of Incubation and Acceleration Infrastructure:** Assist globally and nationally renowned incubators and accelerators to set up new facilities and strengthen existing infrastructure in the State.
- **Pillar 5- Building Inclusive & Equitable Startup Ecosystem:** Embrace diversity, equity, and inclusion to support a holistic and gender-neutral Startup ecosystem across the State.
- **Pillar 6- Fostering Social and Rural Entrepreneurship:** Encourage and promote innovative Startups from Tier II and Tier III cities, focused on elementary/grassroot-level innovation and help them to scale up and grow.
- **Pillar 7- Channelizing Innovation for Societal Impact:** Explore new tech-driven business models and disruptive innovation technologies by encouraging Startups/young entrepreneurs to solve social impact issues pertaining to ESG framework and SDGs.

- **Pillar 8: Enablement and Facilitation:** Adopt a trust-based governance approach for handholding Startups and facilitating ease of doing business in the State through various key enablers viz. Startup Cell, Startup Portal 2.0, etc.
- **Pillar 9: Providing State support in the form of incentives & concessions:** Provide support in the form of incentives and concessions to Startups during the policy period.

(6) The fiscal incentives and offerings under the Karnataka Startup Policy 2022-27 include funding support towards establishment and strengthening NAIN centres in Technology Institutions of Higher Education, Technology Business Incubators 2.0 (TBIs 2.0) in Institutions of higher learning and various funding support to Startups (Idea2PoC Grant-In-Aid Scheme, Seed Fund, Fund of Funds, Grand Challenge etc). Startups will also be provided with reimbursement support for GST, Marketing Cost, Patents Filing Cost and Quality Certification Cost.

(7) The proposal of MD-KITS has been examined by Government. The Startup Policy has been approved by the State Cabinet vide subject No. C:715/2022 in the meeting held on 22nd December, 2022. Hence the order.

**Government Order No. ITBT 6 PRM 2022,**
**Bengaluru, dt:28.12.2022**

In the circumstances explained in the preamble, Government of Karnataka is pleased to accord approval to the **'Karnataka Startup Policy 2022-2027'**, annexed to this Government Order.

(2) This order is issued with the concurrence of Finance Department vide endorsement No:FD 111 Exp-2/2022, dt:13.10.2022 & dt:31.10.2022; Women & Child Development vide No:DITB/TECH/TECM/9/2022, dt: 27.08.2022; Labour Department No. LD 451 LET 2022, dt:20.08.2022; Higher Education Department UO Note No. ED 117 DTE 2022, dt: 22.11.2022; Skill Development & Entrepreneurship Department vide No. SDEL/173/SSM/2022, dt:22.11.2022 and DPAR (e-Governance) vide No: DPAR-PRJ/126/2022-DO3, dt: 02.11.2022.

By order and in the name of the
Governor of Karnataka

**(E. V. Ramana Reddy)**
Additional Chief Secretary to Government,
Department of Electronics, Information Technology,
Biotechnology and Science & Technology.

**To:**

The Compiler, Karnataka Government Gazette, Bengaluru.

**Copy to:**

1. The Accountant General (Audit & Accounts), Karnataka, Bengaluru.
2. ACS and Development Commissioner, Govt. of Karnataka, Bengaluru.
3. Additional Chief Secretary, Finance Department, Bengaluru.

4. Principal Secretary to Hon'ble Chief Minister, Vidhana Soudha.
5. All Additional Chief Secretaries/Principal Secretaries/Secretaries to Government.
6. Commissioner for Industrial Development and Director of Industries and Commerce.
7. Regional Commissioners, Bengaluru, Mysuru, Belagavi & Kalaburagi.
8. All Deputy Commissioners of Districts.
9. CEO-Karnataka Industrial Areas Development Board.
10. Director, Directorate of Electronics, Information Technology & Biotechnology, Bengaluru.
11. Managing Director, KITS, Shanthinagar, Bengaluru.
12. The Chairman, Karnataka Vision Group on Startups.
13. Managing Director, Karnataka Udyog Mitra, Khanija Bhavan, Bengaluru.
14. Deputy Secretary to Cabinet Section (Subject No.715/2022).
15. PS to Hon'ble Minister for Electronics, ITBT and S&T, Vikasa Soudha.
16. PS to Chief Secretary, Government of Karnataka, Vidhana Soudha.
17. Vice President, NASSCOM, Bengaluru (through MD-KITS).
18. President, India Electronics & Semiconductor Association [IESA], Bengaluru (through MD-KITS).
19. President, Association of Biotechnology Led Enterprises (through MD-KITS).
20. President, Association of Bangalore Animation Industry (through MD-KITS).
21. Chairman, Karnataka Council, Associated Chambers of Commerce and Industry of India [ASSOCHAM], Bengaluru (through MD-KITS).
22. Chairman, Karnataka State Council, Confederation of Indian Industries (CII), Bengaluru (through MD-KITS).
23. Head, Karnataka State Council, Federation of Indian Chambers of Commerce & Industry [FICCI], Bengaluru (through MD-KITS).
24. President, Federation of Karnataka Chambers of Commerce & Industry [FKCCI], Bengaluru (through MD-KITS).
25. Guard File/Spare Copies.

****